**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 143/2019**

**ಸಿಡಬ್ಲೂಃ4 ಪಿ ಡಬ್ಲ್ಯೂಃ4**

**ಹೆಸರುಃ** ಹಸಿನಾಬಾನು

**ಗಂಡನ ಹೆಸರುಃ** ಹಜಮಸಾಬ ಮುಲ್ಲಾ

**ವಯಸ್ಸುಃ** 48 ವರ್ಷಗಳು.

**ಉದ್ಯೋಗಃ** ಮನೆಗೆಲಸ

**ವಾಸ ಸ್ಥಳಃ** ಕಳಸ.

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ07.02.2025**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾಃ1 ನನ್ನ ಗಂಡ. ಚಾಸಾಃ2, 3, 6 ರಿಂದ 8 ರವರ ಪರಿಚಯ ಇದೆ. ಚಾಸಾಃ5 ನನ್ನ ಮಗ. ನ್ಯಾಯಾಲಯದ ಮುಂದೆ ಇರುವ 1 ರಿಂದ 13 ಆರೋಪಿಗಳು ನನ್ನ ಸಂಬಂಧಿಕರು.

ನಮ್ಮ ಮತ್ತು ಆರೋಪಿಗಳ ನಡುವೆ ಆಗಾಗ ಆಗಾಗ ಆಸ್ತಿಗೆ ಸಂಬಂದಪಟ್ಟ ಹಾಗೇ ಜಗಳ ಆಗುತ್ತಿರುತ್ತದೆ. ಈ ಪ್ರಕರಣಕ್ಕೆ ಸಂಬಂದಪಟ್ಟ ಜಗಳ ಈಗ ಏಳು ವರ್ಷದ ಹಿಂದೆ ಆಗಿರುತ್ತದೆ. ಜಗಳವಾದ ಸಮಯ ಸಂಜೆ 6ಃ00 ಗಂಟೆಯಾಗಿರುತ್ತದೆ. ನನ್ನ ಗಂಡ ಚಾಸಾಃ1 ರವರು ಮನೆಯ ಮುಂದೆ ನಿಂತಾಗ ಆರೋಪಿತರೆಲ್ಲರೂ ಬಂದು ಈ ಜಗ ನಮ್ಮದು ಅಂತ ಹೇಳಿ ಬೈದಾಡಿ ಈ ಜಾಗದಲ್ಲಿ ಮನೆ ಕಟ್ಟಬೇಡಿ ಅಂತ ಹೇಳಿದರು. ಆಗ ಚಾಸಾಃ1 ರವರು ನಮ್ಮದು, ನಾವು ಮನೆ ಕಟ್ಟುತ್ತೇವೆ ಅಂತ ಹೇಳಿದಾಗ ಆರೋಪಿತರು ನಾವು ಮನೆ ಕಟ್ಟಲು ಬಿಡುವುದಿಲ್ಲ ಅಂತ ಹೇಳಿ ಚಾಸಾಃ1 ರವರಿಗೆ 1 ನೇ ಆರೋಪಿ ಕಟ್ಟಿಗೆಯಿಂದ ತಲೆಗೆ, ಬೆನ್ನಿಗೆ, ಕೈಕಾಲಿಗೆ ಹೊಡೆದರು, ಈ ರೀತಿ 1 ನೇ ಆರೋಪಿ ಕಟ್ಟಿಗಿಯಿಂದ ಹೊಡೆದಿದ್ದರಿಂದ ಚಾಸಾಃ1 ರವರಿಗೆ ತಲೆಗೆ ರಕ್ತಗಾಯವಾಗಿದ್ದು, ಇನ್ನುಳಿದ ಆರೋಪಿತರೆಲ್ಲರೂ ಸೇರಿ ಚಾಸಾಃ1 ರವರಿಗೆ ಈ ಜಾಗ ಬಿಟ್ಟು ಹೋಗು ಅಂತ ಹೇಳಿ ಕೈಯಿಂದ ಹೊಡೆದು ಕಾಲುಗಳಿಂದ ಒದ್ದಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತಾರೆ. ಚಾಸಾಃ1 ರವರಿಗೆ ಆರೋಪಿತರು ಹೊಡೆಯುವಾಗ ನಾನು ಮತ್ತು ಚಾಸಾಃ5 ನನ್ನ ಮಗ ಬಿಡಿಸಲು ಹೋದರು.

ಚಾಸಾಃ5 ರವರನ್ನು ಸಹ ಆರೋಪಿತರು ಹೊಡೆಯಲು ಪ್ರಾರಂಭಿಸಿದರು. ನನಗೆ ಜಗಳ ಬಿಡಿಸಲು ಆಗಲಿಲ್ಲ. ಆಗ ಚಾಸಾಃ6 ರಿಂದ 8 ರವರು ಬಂದು ಜಗಳ ಬಿಡಿಸಿದರು.

ಜಗಳ ಬಿಡಿಸಿದ ನಂತರ ನಾವು ಗುಡಗೇರಿ ಸರಕಾರಿ ದವಾಖಾನೆಗೆ ಹೋದೆವು. ಅದಾದನಂತರ ಚಾಸಾಃ1 ರವರು ಆರೋಪಿಗಳ ವಿರುದ್ಧ ಗುಡಗೇರಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದರು.

ಈ ಹಂತದಲ್ಲಿ ಮಾನ್ಯ ಸಸಅ ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

ಚಾಸಾಃ1 ರವರಿಗೆ ಹೊಡೆ ಬಡೆ ಮಾಡುವ ಸಮಯದಲ್ಲಿ ನಾನು ಮತ್ತು ನನ್ನ ಮಗ ಚಾಸಾಃ5 ರವರು ಬಿಡಿಸಲು ಹೋದಾಗ 8 ರಿಂದ 13 ಆರೋಪಿತರು ಕೈಯಿಂದ ಹೊಡೆ ಬಡೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದಾಡಿರುತ್ತಾರೆ ಎಂದರೆ ಸರಿ. ಆರೋಪಿತರು ಹೊಡೆಯುವ ಹೊಡೆತಕ್ಕೆ ನಾವು ಮೂರು ಜನ ಜೋರಾಗಿ ಚೀರಾಡದೆವು ಎಂದರೆ ಸರಿ. ನಂತರ ಆರೋಪಿತರು ಹೋಗುವ ಸಮಯದಲ್ಲಿ ನಮಗೆ ಜೀವದ ಧಮ್ಕಿ ಹಾಕಿದರು. ಈ ಘಟನೆಯಾದ ನಂತರ ನಾನು ಮತ್ತು ಚಾಸಾಃ1 ರವರು ಮಾತ್ರ ಗುಡಗೇರಿ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆ ಪಡೆದಿರುತ್ತೇವೆ ಎಂದರೆ ಸರಿ. ಎಮ್ ಓ ನಂಃ1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಜಿ ಬಿ ಎಸ್ ವಕೀಲರಿಂದ ಆರೋಪಿತರ ಪರ ವಕೀಲರುಃ**

ಜಗಳವಾದ ತಾರೀಖು ಮತ್ತು ತಿಂಗಳು ಹೇಳಲಾಗುವುದಿಲ್ಲ. ಸದರಿ ಜಗಳ ಯಾವ ವಾರದಲ್ಲಿ ಆಯಿತು ಅಂತ ಲಕ್ಷ್ಯಕ್ಕೆ ಇಲ್ಲ. ನಮ್ಮ ಮತ್ತು ಆರೋಪಿಗಳ ನಡುವೆ ದಿವಾಣಿ ಸ್ವರೂಪದ ವ್ಯಾಜ್ಯಗಳು ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಚಾಸಾಃ5 ನನ್ನ ಮಗ. ನನ್ನ ಮಗ 5 ನೇ ಆರೋಪಿಗೆ ಚಾಕುವಿನಿಂದ ಹಲ್ಲೆ ಮಾಡಿರುವ ಪ್ರಕರಣ ಹುಬ್ಬಳ್ಳಿಯ ಸೆಸನ್ಸ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ಆ ಪ್ರಕರಣದಲ್ಲಿ ನನ್ನ ಮಗ ಆರೋಪಿಯಾಗಿದ್ದು, ಅವನು ಜೈಲಿಗೂ ಸಹ ಹೋಗಿಬಂದಿರುತ್ತಾನೆ.

ಚಾಸಾಃ1 ನನ್ನ ಗಂಡ. 1 ರಿಂದ 13 ನೇ ಆರೋಪಿತರು ಯಾವುದೇ ಅಪರಾಧ ಮಾಡದಿದ್ದರು ಸಹ ಅವರಿಗೆ ರಾಜಿಗೆ ಒತ್ತಾಯ ತರುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರು ಸಹ ಅವರ ವಿರುದ್ಧ ಒಂದು ಖೊಟ್ಟಿ ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿ

ಇನ್ನುಳಿದ ಆರೋಪಿತರೊಂದಿಗೆ ಬಂದು ನಮಗೆ ಜೀವದ ಧಮಕಿ ಹಾಕಿದರು ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಎಮ್ ಓ ನಂঃ1 ರಂತಹ ಬಡಿಗೆ ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸಾಕ್ಷಿ ಅವು ನಮ್ಮ ಮನೆಯಲ್ಲಿ ಇಲ್ಲ, ಆರೋಪಿತರ ಮನೆಯಲ್ಲಿ ಬಹಳಷ್ಟು ಇವೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಆಸ್ತಿಯನ್ನು ನಾವು ಪಡೆಯಬೇಕು ಅಂತ ಹೇಳಿ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 143/2019**

**ಸಿಡಬ್ಲೂಃ5 ಪಿ ಡಬ್ಲ್ಯೂಃ5**

**ಹೆಸರುಃ** ಜಿಲಾನಿ

**ತಂದೆ ಹೆಸರುಃ** ಹಜಮಸಾಬ ಮುಲ್ಲಾ

**ವಯಸ್ಸುಃ** 28 ವರ್ಷಗಳು.

**ಉದ್ಯೋಗಃ** ಕೂಲಿ

**ವಾಸ ಸ್ಥಳಃ** ಕಳಸ.

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ07.02.2025**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಚಾಸಾಃ1 ನನ್ನ ತಂದೆ. ಚಾಸಾಃ2 ಹಾಗೂ 3, 6 ರಿಂದ 8 ರವರ ಪರಿಚಯ ಇದೆ. ಚಾಸಾಃ4 ನನ್ನ ತಾಯಿ. ನ್ಯಾಯಾಲಯದ ಮುಂದೆ ಇರುವ 1 ರಿಂದ 13 ಆರೋಪಿಗಳು ನನ್ನ ಸಂಬಂಧಿಕರು.

ನಮ್ಮ ಮತ್ತು ಆರೋಪಿಗಳ ನಡುವೆ ಆಗಾಗ ಆಗಾಗ ಮನೆಗೆ ಸಂಬಂದಪಟ್ಟ ಹಾಗೇ ಜಗಳ ಆಗುತ್ತಿರುತ್ತದೆ. ದಿಃ18.05.2018 ರಂದು ಸಂಜೆ 6ಃ00 ಗಂಟೆಗೆ ನಮ್ಮದು ಖಾಲಿ ಜಾಗ ಇದ್ದು, ಅಲ್ಲಿ ನಾವು ಮನೆ ಕಟ್ಟಿಸುತಿದ್ದು, ಅಚಾನಕವಾಗಿ 1 ನೇ ಆರೋಪಿ ಬಂದು ಕೆಲಸ ಮಾಡಬೇಡ್ರಿ ಇದು ಜಾಗ ನಮ್ಮದು ಅಂತ ಹೇಳಿ ಬೈದಾಡಿದರು. ನಾವು ಅವರಿಗೆ ಇಲ್ಲ, ಅದು ನಮ್ಮ ಜಾಗ ಅಂತ ಹಿರಿಯರ ಮೂಲಕ ಬಗೆಹರಿಸೋಣಾ ಅಂತ ಹೇಳಿದರು ಸಹ ಕೇಳದೆ ಸಾಯಂಕಾಲ 1 ರಿಂದ 9 ನೇ ಆರೋಪಿತರು ಇವರು ಚಾಸಾಃ1 ನನ್ನ ತಂದೆ ಮನೆಯ ಹೊರಗೆ ನಿಂತಾಗ ಅವರಿಗೆ ಬೈದಾಡಿ, ಮನೆ ಹೇಗೆ ಕಟ್ಟುತಿಯಾ ಅಂತ ಹೇಳಿ, 1 ನೇ ಆರೋಪಿ ಕಟ್ಟಿಗೆಯನ್ನು ತೆಗೆದುಕೊಂಡು ಚಾಸಾಃ1 ರವರಿಗೆ ತಲೆಗೆ ಹೊಡೆದರು, ಈ ರೀತಿ ತಲೆಗೆ ಹೊಡೆದಿದ್ದರಿಂದ ನನ್ನ ತಂದೆಗೆ ತಲೆಗೆ ದೊಡ್ಡ ಗಾಯವಾಗಿತ್ತು. ಇನ್ನುಳಿದು ಆರೋಪಿತರು ಚಾಸಾಃ1 ರವರಿಗೆ ಕೆಳಗೆ ಕೆಡವಿ ಕೈಯಿಂದ ಹೊಡೆದು ಕಾಲನಿಂದ ಒದಿದ್ದರು. ಆಗ ನನ್ನ ತಂದೆ ಚಿರಾಡಿದರು, ಅದನ್ನು ಕೇಳಿ ನಾನು ಮತ್ತು ನನ್ನ ತಾಯಿ ಹೋಗಿ ಬಿಡಿಸಲು ಮುಂದಾಗ 8 ರಿಂದ 13 ನೇ ಆರೋಪಿತರು ಚಾಸಾಃ4 ರವರಿಗೆ ಹೊಡೆದರು. ಚಾಸಾಃ8 ರಿಂದ 13 ರವರು ತಮ್ಮ ತಮ್ಮ ಕೈಗಳಲ್ಲಿ ಬಡಿಗೆಗಳನ್ನು ಹಿಡಿದುಕೊಂಡು ಬಂದಿದ್ದು ಅವರು ನನ್ನನ್ನು ಸಹ ಹೊಡೆಯಲಿಕ್ಕಿ ಬಂದರು. ಆಗ ನಾನು

ಏನು ಇದೆ ಕೂತು ಬಗೆಹರಿಸೋಣಾ ಅಂತ ಹೇಳಿದೆ. ಅವರು ಕೇಳದೆ ಆರೋಪಿ 1 ರಿಂದ 13 ರವರು ನನ್ನನ್ನು ಸಹ ಹೊಡೆ ಬಡೆ ಮಾಡಿರುತ್ತಾರೆ.

ಜಗಳವನ್ನು ಬಿಡಿಸಲು ನಮ್ಮ ಓಣಿಯವರಾದ ಚಾಸಾಃ6 ರಿಂದ 8 ರವರು ಬಂದರು. ಈ ರೀತಿ ಚಾಸಾಃ6 ರಿಂದ 8 ರವರು ಜಗಳ ಬಿಡಿಸಿ ಹೋದಾಗ ಆರೋಪಿತರು ನಮ್ಮನ್ನು ಬೈದಾಡಿ ಮತ್ತು ನಿಮ್ಮನ್ನು ಬಿಡುವುದಿಲ್ಲ ಮುಗಿಸಿ ಬಿಡುತ್ತೇವೆ ಅಂತ ಹೇಳಿ ಜೀವದ ಧಮಕಿ ಹಾಕಿದರು.

ಚಾಸಾಃ1 ಮತ್ತು 4 ರವರು ಗುಡಗೇರಿ ಸರಕಾರ ಆಸ್ಪತ್ರೆಗೆ ಹೋದರು. ಚಾಸಾಃ1 ರವರು ಆರೋಪಿತರ ವಿರುದ್ಧ ಗುಡಗೇರಿ ಪೊಲೀಸ ಠಾಣೆಯಲ್ಲಿ ದೂರನ್ನು ನೀಡಿರುತ್ತಾರೆ.ನ್ಯಾಯಾಲಯದ ಮುಂದೆ ಇರುವ ಎಮ್ ಓ ನಂಃ1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಜಿ ಬಿ ಎಸ್ ವಕೀಲರಿಂದ ಆರೋಪಿತರ ಪರ ವಕೀಲರುಃ**

ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ಪೊಲೀಸರು ಏನು ಬರೆದಿದ್ದಾರೆ ಅಂತ ನನಗೆ ಗೊತ್ತಿಲ್ಲ. ಆದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಡಿಃ2 ಎಂದು ಗುರುತಿಸಲಾಯಿತು. ನಮ್ಮ ಮತ್ತು ಆರೋಪಿಗಳ ನಡುವೆ ದಿವಾಣಿ ಸ್ವರೂಪದ ವ್ಯಾಜ್ಯಗಳು ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ.

ನಾನು 5 ನೇ ಆರೋಪಿಗೆ ಚಾಕುವಿನಿಂದ ಹಲ್ಲೆ ಮಾಡಿರುವ ಬಗ್ಗೆ ಪ್ರಕರಣ ಹುಬ್ಬಳ್ಳಿಯ ಸೆಸನ್ಸ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂದಪಟ್ಟ ಹಾಗೇ ಇನ್ನೊಂದು ಪ್ರಕರಣ ಆರೋಪಿತರು ನಮ್ಮ ವಿರುದ್ಧ ದಾಖಲಿಸಿರುವ ಬಗ್ಗೆ ಗೊತಿದಿಯಾ ಎಂದರೆ ಸಾಕ್ಷಿ ಗೊತ್ತಿದೆ ಎಂದು ನುಡಿಯುತ್ತಾರೆ. ಈ ಪ್ರಕರಣಕ್ಕೆ ಸಂಬಂದಪಟ್ಟ ಹಾಗೇ ಚಾಸಾಃ1 ರವರು ದೂರು ನೀಡಿದ್ದಾರೆ ಎಂದರೆ ಸರಿ. ನನ್ನ ತಾಯಿ ಚಾಸಾಃ4 ಸಾಕ್ಷಿ ನುಡಿದಿದ್ದಾರೆ ಎಂದರೆ ಸರಿ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರು ಸಹ ನಾನು ಮತ್ತು ನನ್ನ ತಾಯಿ ಸೇರಿಕೊಂಡು ನಮ್ಮ ತಂದೆಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಆರೋತರು ನಮಗೆ ಹೊಡೆ ಬಡೆ ಮಾಡಿ, ಜೀವದ ಧಮ್ಮಕಿ ಹಾಕಿದರು ಅಂತ ನಾನು ಕಥೆಯನ್ನು ಸೃಷ್ಟಿ ಮಾಡಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಚಾಸಾಃ1 ನನ್ನ ತಂದೆ ಹಾಗೂ ಚಾಸಾಃ4 ನನ್ನ ತಾಯಿಯಾಗಿದ್ದರಿಂದ 1 ರಿಂದ 13 ನೇ ಆರೋಪಿತರು ಯಾವುದೇ ಅಪರಾಧ ಮಾಡದಿದ್ದರು ಸಹ ಅವರಿಗೆ ರಾಜಿಗೆ ಒತ್ತಾಯ ತರುವ ಉದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ

ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರು ಸಹ ಅವರ ವಿರುದ್ಧ ಒಂದು ಖೊಟ್ಟಿ ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿ ಇನ್ನುಳಿದ ಆರೋಪಿತರೊಂದಿಗೆ ಬಂದು ನಮಗೆ ಜೀವದ ಧಮಕಿ ಹಾಕಿದರು ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಎಮ್ ಓ ನಂ:1 ರಂತಹ ಬಡಿಗೆ ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸಾಕ್ಷಿ ಅವು ನಮ್ಮ ಮನೆಯಲ್ಲಿ ಇಲ್ಲ, ಆರೋಪಿತರ ಮನೆಯಲ್ಲಿ ಬಹಳಷ್ಟು ಇವೆ ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಆಸ್ತಿಯನ್ನು ನಾವು ಪಡೆಯಬೇಕು ಅಂತ ಹೇಳಿ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**